ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 28-12-1978.

# *ಪರಮಾತ್ಮ ಪ್ರತ್ಯಕ್ಷತೆಗೆ ಆಧಾರ- ಸತ್ಯತೆ.*

(परमात्म प्रत्यक्षता का आधार - सत्यता)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ಪ್ರೇಮ ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಅವ್ಯಕ್ತ ಬಾಪ್‌ದಾದಾ ಮಾತನಾಡುತ್ತಿದ್ದಾರೆ.**

ಇಂದು ಬಾಪ್‌ದಾದಾ ಸರ್ವ ಮಕ್ಕಳನ್ನು ಶಕ್ತಿಸೈನ್ಯ ಅಥವಾ ಪಾಂಡವಸೈನ್ಯದ ರೂಪದಲ್ಲಿ ನೋಡುತ್ತಿದ್ದಾರೆ. ಸೇನಾಧಿಪತಿಯು ತನ್ನ ಸೇನೆಯನ್ನು ನೋಡಿ ಸಂತೋಷಪಡುತ್ತಲೂ ಇದ್ದಾರೆ ಹಾಗು ಜೊತೆ ಜೊತೆಗೆ ತಮ್ಮ ಸೇನೆಯ ಮಹಾರಥಿ ಅಥವಾ ಕುದುರೆಸವಾರ ಇಬ್ಬರ ಕರ್ತವ್ಯವನ್ನು ನೋಡುತ್ತಾ ಇದ್ದಾರೆ. ಮಹಾರಥಿಗಳು ಏನು ಮಾಡುತ್ತಿದ್ದೀರಿ, ಕುದುರೆ ಸವಾರರು ಏನು ಮಾಡುತ್ತಿದ್ದೀರಿ? ಇಬ್ಬರೂ ನಿಮ್ಮ ನಿಮ್ಮ ಪಾತ್ರವನ್ನು ಅಭಿನಯಿಸುತ್ತಿದ್ದೀರಿ. ಎಲ್ಲಿಯವರೆಗೆ ನಾಟಕದನುಸಾರವಾಗಿ ಪ್ರತಿಯೊಬ್ಬರೂ ಯಾವ ಪಾತ್ರವನ್ನು ಅಭಿನಯಿಸಿದಿರೋ ಅದು ಅನುಕ್ರಮವಾಗಿ(ನಂಬರ್ ವಾರ್) ಚೆನ್ನಾಗಿದೆ ಎಂದು ಹೇಳಬಹುದು. ಆದರೆ ಈಗ ಏನು ಮಾಡಬೇಕು? ಮಹಾರಥಿಗಳು ಈಗ ತಮ್ಮ ಯಾವ ಮಹಾವೀರತನವನ್ನು ತೋರಿಸಬೇಕು? ಬಾಪ್‌ದಾದಾ ವಿಶೇಷವಾಗಿ ಮಾಹಾವೀರರು ಹಾಗೂ ಮಹಾವೀರಣಿಯರ ಪಾತ್ರವನ್ನು ನೋಡುತ್ತಾ ಇದ್ದರು. ಇಲ್ಲಿಯವರೆಗೆ ಸೇವೆಯಕ್ಷೇತ್ರದಲ್ಲಿ ಎಲ್ಲಿಯತನಕ ತಲುಪಿದ್ದೀರಿ? ಹೇಗೆ ಸ್ಥೂಲ ಸೈನ್ಯದ ಸೇನಾಪತಿಯು ನಕ್ಷೆಯ ಆಧಾರದಿಂದ ಸೇನೆಯು ಎಲ್ಲಿಯವರೆಗೆ ತಲುಪಿದೆ ಎಂಬುದನ್ನು ಸದಾ ನೋಡುತ್ತಾ ಇರುತ್ತಾನೆ. ಎಷ್ಟು ಸ್ಥಳದಮೇಲೆ ಜಯಶಾಲಿ ಆಗಿದ್ದೇನೆ ಎನ್ನುವುದನ್ನು ನೋಡುತ್ತಿರುತ್ತಾನೆ. ಅಸ್ತ್ರಶಸ್ತ್ರಗಳು ಯುದ್ಧದ ಸಾಮಾಗ್ರಿಗಳು ಎಷ್ಟರಮಟ್ಟಿಗೆ ಸಂಗ್ರಹ ಆಗಿವೆ, ಮುಂದೆ ಲಕ್ಷ್ಯ ಏನಿದೆ ಎನ್ನುವುದನ್ನು ನೋಡುತ್ತಿರುತ್ತಾನೆ. ಲಕ್ಷ್ಯದ ನೆಲೆಯಿಂದ ಎಷ್ಟು ದೂರ ಇದ್ದೇನೆ ಯಾವ ವೇಗದಿಂದ ಮುಂದುವರೆಯುತ್ತಾ ಇದ್ದೇನೆ ಎನ್ನುವುದನ್ನು ನೋಡುತ್ತಿರುತ್ತಾರೆ. ಹಾಗೆಯೇ ಇಂದು ಬಾಪ್‌ದಾದಾ ಸಹ ಆದಿಯಿಂದ ಇಲ್ಲಿಯವರೆಗಿನ ಸೇವೆಯ ನಕ್ಷೆಯನ್ನು ನೋಡುತ್ತಾ ಇದ್ದರು. ಫಲಿತಾಂಶವನ್ನು ಏನು ನೋಡಿದರು. ಮಹಾವೀರ ಅಥವಾ ಮಹಾವೀರಣಿಯರು ಸೇವೆಯ ಕ್ಷೇತ್ರದಲ್ಲಿ ಮುಂದೆ ಹೋಗುತ್ತಾ ಇದ್ದರು. ಶಸ್ತ್ರಗಳೂ ಸಹ ಎಲ್ಲವೂ ಜೊತೆಯಲ್ಲಿದ್ದವು.

ಕ್ಷೇತ್ರವನ್ನೂ ಸಹ ವಿಸ್ತಾರ ಮಾಡುತ್ತಾ ಹೋಗುತ್ತಿದ್ದರು. ಆದರೆ ಇಲ್ಲಿಯವರೆಗೆ ಅತ್ಮಿಕ ಬಾಂಬನ್ನು ಹಾಕಿದ್ದೀರಿ. ಈಗ ಪರಮಾತ್ಮನ ಬಾಂಬನ್ನು ಹಾಕಬೇಕಾಗಿದೆ. ಅತ್ಮಿಕ ಸುಖ ಅಥವಾ ಆತ್ಮಿಕ ಶಾಂತಿಯ ಅನುಭೂತಿಯು ಆತ್ಮೀಯತೆಯ ಅನುಭೂತಿಯ ಭಿನ್ನ ಭಿನ್ನ ಶಸ್ತ್ರಗಳು ಅನುಕ್ರಮವಾಗಿ, ಸಮಯದನುಗುಣವಾಗಿ ಕಾರ್ಯದಲ್ಲಿ ಉಪಯೋಗಿಸಲ್ಪಟ್ಟಿವೆ. ಆದರೆ ಅಂತಿಮ ಬಾಂಬ್ ಎಂದರೆ ಪರಮಾತ್ಮ ಬಾಂಬ್, ತಂದೆಯ ಪ್ರತ್ಯಕ್ಷತೆಯ ಬಾಂಬಾಗಿದೆ. ಯಾರು ನೋಡಿದರೂ, ಸಂಪರ್ಕದಲ್ಲಿ ಬಂದು ಕೇಳಿದರೂ ಅವರ ಮೂಲಕ **"ಪರಮಪಿತನು ಬಂದಿದ್ದಾರೆ. ಪ್ರತ್ಯಕ್ಷದಲ್ಲಿ ಸರ್ವಶಕ್ತಿವಂತ ಈಶ್ವರನ ಕರ್ತವ್ಯವು ನಡೆಯುತ್ತಾ ಇದೆ. "** ಎನ್ನುವುದು ಎಲ್ಲೆಡೆ ಪ್ರಚಲಿತ ಆಗಬೇಕು. ಇದು ಅಂತಿಮ ಬಾಂಬಾಗಿದೆ. ಇದರಿಂದ ನಾಲ್ಕೂ ಕಡೆ ತಂದೆಯ ಅವತರಣೆಯ ಸುದ್ದಿಯು ಜನಜನಿತ ಆಗುವುದು. ಈ ಕಾರ್ಯವು ಇನ್ನೂ ಉಳಿದಿದೆ. ಇದು ಹೇಗೆ ಆಗುವುದು. ಯಾವಾಗ ಆಗುವುದು. ಪರಮಾತ್ಮನ ಪ್ರತ್ಯಕ್ಷತೆಯ ಆಧಾರವೇ ಸತ್ಯತೆ ಆಗಿದೆ. ಸತ್ಯತೆಯೇ ಪ್ರತ್ಯಕ್ಷತೆ ಆಗಿದೆ ಒಂದು ಸ್ವಯಂನ ಸ್ಥಿತಿಯ ಸತ್ಯತೆ, ಇನ್ನೊಂದು ಸೇವೆಯ ಸತ್ಯತೆ. ಸತ್ಯತೆಯ ಆಧಾರವು ಸ್ವಚ್ಛತೆ ಹಾಗೂ ನಿರ್ಭಯತೆ ಆಗಿವೆ. ಈ ಎರಡೂ ಧಾರಣೆಗಳ ಆಧಾರದಿಂದ ಸತ್ಯತೆಯ ಮೂಲಕವೇ ಪ್ರತ್ಯಕ್ಷತೆ ಆಗುವುದು. ಯಾವುದೇ ಪ್ರಕಾರದ ಅಸ್ವಚ್ಛತೆ ಇದ್ದರೆ, ಎಂದರೆ ಸತ್ಯತೆ, ಸ್ವಚ್ಛತೆಯು ಸ್ವಲ್ಪ ಕಡಿಮೆ ಇದ್ದರೂ ಕರ್ತವ್ಯದ ಸಿದ್ಧಿ ಎಂದರೆ ಪ್ರತ್ಯಕ್ಷತೆಯು ಆಗಲು ಸಾಧ್ಯವಿಲ್ಲ.

ಸತ್ಯತೆ ಹಾಗೂ ಸ್ವಚ್ಛತೆ - ಸತ್ಯತೆ ಎಂದರೆ ನಾನು ಯಾರಾಗಿದ್ದೇನೆ. ಹೇಗಿದ್ದೇನೆ ಎನ್ನುವ ಆ ಮೂಲ ಸತ್ಯ ಸ್ವರೂಪದಲ್ಲಿ ಸ್ಥಿತ ಆಗುವುದು. ಎಂದರೆ ಆತ್ಮನ ತನ್ನ ನಿಜ ಸತ್ವಪ್ರಧಾನ ಸ್ವರೂಪದಲ್ಲಿ ಸ್ಥಿತವಾಗಬೇಕು. ರಜೋ ಹಾಗು ತಮೋ ಸ್ಥಿತಿಗಳು ಸತ್ಯತೆಯ ಮೂಲ ಹಂತವಲ್ಲ. ಇದು ಸಂಗದೋಷದ ಹಂತವಾಗಿದೆ. ಯಾರ ಸಂಗದೋಷ? ಮಾಯೆ ಅಥವಾ ರಾವಣನ ಸಂಗದೋಷವಾಗಿದೆ. ಆತ್ಮನ ಸತ್ಯತೆಯು ಸತ್ವಪ್ರಧಾನತೆಯಾಗಿದೆ. ಆದ್ದರಿಂದ ಮೊದಲು ಈ ಸತ್ಯತೆಯು ಇದೆಯೋ? ಎರಡನೆಯದಾಗಿ ನುಡಿ ಹಾಗೂ ಕರ್ಮದಲ್ಲಿಯೂ ಸತ್ಯತೆಯು ಇರುವ ಸತ್ಯತೆಯ ಹಂತವಾದ ಸತ್ವ ಪ್ರಧಾನತೆ ಇದೆಯೋ? ಅಥವಾ ಇನ್ನೂ ರಜೋ ಹಾಗೂ ತಮೋನ ಬೆರಕೆ ಇದೆಯೋ? ಸತ್ಯತೆಯು ಸ್ವಾಭಾವಿಕ ಸಂಸ್ಕಾರ ರೂಪದಲ್ಲಿ ಇದೆಯೋ ಅಥವಾ ಪುರುಷಾರ್ಥದಿಂದ ಸತ್ಯತೆಯ ಹಂತವನ್ನು ತಂದುಕೊಳ್ಳಬೇಕಾಗುತ್ತದೆಯೋ? ಹೇಗೆ ತಂದೆಯನ್ನು ಟ್ರುತ್ ಎಂದರೆ ಸತ್ಯ ಎಂದು ಕರೆಯಲಾಗುತ್ತದೆ. ಹಾಗೆಯೇ ಆತ್ಮಿಕ ಸ್ವರೂಪದ ವಾಸ್ತವಿಕತೆ ಅಥವಾ ನೈಜತೆಯೂ ಸಹ ಸತ್ಯ ಎಂದರೆ ಟ್ರುತ್ ಆಗಿದೆ. ಆದ್ದರಿಂದ ಸತ್ಯತೆ ಎಂದು ಸತ್ವಪ್ರಧಾನತೆಗೆ ಕರೆಯಲಾಗುತ್ತದೆ. ಇಂತಹ ಸತ್ಯತೆ ಇದೆಯೇ?

**ಶುಭ್ರತೆ ಎಂದರೆ ಸ್ವಚ್ಛತೆ. ಲೇಶಮಾತ್ರವೂ, ಸಂಕಲ್ಪದ ಮೂಲಕವೂ ಸಹ ಅಶುದ್ಧ ಎಂದರೆ ಕೆಟ್ಟತನವನ್ನು ಎಂದರೆ ಅವಗುಣವನ್ನು ಸ್ಪರ್ಶ ಮಾಡಬಾರದು. ಒಂದು ವೇಳೆ ಬುದ್ಧಿ ಅಥವಾ ಸಂಕಲ್ಪದ ಮೂಲಕವಾದರೂ ಅವಗುಣವನ್ನು ಸ್ವೀಕಾರ ಮಾಡಿದರೆ ಅದನ್ನು ಸಂಪೂರ್ಣ ಸ್ವಚ್ಛತೆ ಎಂದು ಕರೆಯುವುದಿಲ್ಲ.** ಹೇಗೆ ಸ್ಥೂಲದಲ್ಲಿಯೂ ಯಾವುದೇ ಪ್ರಕಾರದ ಕೊಳಕನ್ನು ನೋಡುವುದು ಸಹ ಒಳಿತೆನಿಸುವುದಿಲ್ಲ. ನೋಡುವುದರಿಂದ ದೂರ ಸರಿಯುತ್ತೀರಿ. ಹಾಗೆಯೇ ಕೆಟ್ಟದ್ದನ್ನು ಆಲೋಚಿಸುವುದೂ ಸಹ ಕೆಟ್ಟತನವನ್ನು ಸ್ಪರ್ಶಮಾಡಿದಂತಾಗುತ್ತದೆ. ಕೇಳುವುದು ಹಾಗೂ ಹೇಳುವುದು ಅಥವಾ ಮಾಡುವುದಂತೂ ಸ್ವಯಂ ತಾವೇ ಕೆಟ್ಟತನವನ್ನು ಧಾರಣೆ ಮಾಡಿದಂತಾಗುತ್ತದೆ. ಶುಭ್ರತೆ ಎಂದರೆ ಸ್ವಚ್ಛತೆ, ಸಂಕಲ್ಪ ಮಾತ್ರದಲ್ಲಿಯೂ ಸಹ ಅಶುದ್ಧಿ ಇರಬಾರದು. ಇದನ್ನು ಸತ್ಯತೆ ಹಾಗೂ ಸ್ವಚ್ಛತೆ ಎಂದು ಕರೆಯಲಾಗುತ್ತದೆ. ಇನ್ನೊಂದು ವಿಶೇಷತೆಯು ನಿರ್ಭಯತೆ ಆಗಿದೆ. ನಿರ್ಭಯತೆಯ ಪರಿಭಾಷೆಯೂ ಸಹ ತುಂಬಾ ಗುಹ್ಯವಾಗಿದೆ. ಮೊದಲನೆಯದಾಯಾಗಿ ನಿಮ್ಮ ಹಳೆಯ ತಮೋಗುಣ ಸಂಸ್ಕಾರಗಳಮೇಲೆ ಜಯಶಾಲಿ ಆಗುವ ನಿರ್ಭಯತೆ. ಏನು ಮಾಡಲಿ ಆಗುವುದಿಲ್ಲ, ಬಹಳ ಪ್ರಭಲವಾಗಿದೆ ಎನ್ನುವುದೂ ಸಹ ನಿರ್ಭಯತೆ ಅಲ್ಲ. ಅನ್ಯ ಆತ್ಮರ ಸಂಪರ್ಕ ಹಾಗೂ ಸಂಬಂಧದಲ್ಲಿ ಸ್ವಯಂ ನಿಮ್ಮ ಸಂಸ್ಕಾರವನ್ನು ಬೆರೆಸಿಕೊಳ್ಳುವುದು ಹಾಗೂ ನೇರ ಸಂಸ್ಕಾರವನ್ನು ಪರಿವರ್ತನೆ ಮಾಡುವುದು, ಇದರಲ್ಲಿಯೂ ನಿರ್ಭಯತೆಯು ಇರಬೇಕು. ಆಗುವುದೋ ಇಲ್ಲವೋ ಗೊತ್ತಿಲ್ಲ, ಇದನ್ನು ನಿರ್ವಹಿಸಲು ಸಾಧ್ಯವಾಗುವುದೋ ಇಲ್ಲವೋ, ನನ್ನ ಮಾತನ್ನು ಕೇಳುವರೋ ಇಲ್ಲವೋ ಎನ್ನುವುದರಲ್ಲಿಯೂ ಒಂದುವೇಳೆ ಭಯ ಇದ್ದರೆ ಅದನ್ನು ಸಂಪೂರ್ಣ ನಿರ್ಭಯತೆ ಎನ್ನುವುದಿಲ್ಲ.

ಮೂರನೆಯದಾಗಿ ವಿಶ್ವದ ಸೇವೆಯಲ್ಲಿ ಎಂದರೆ ಸೇವೆಯ ಕ್ಷೇತ್ರದಲ್ಲಿ ವಾಯುಮಂಡಲ ಅಥವಾ ಅನ್ಯ ಆತ್ಮರ ಸಿದ್ಧಾಂತಗಳ ಪರಿಪಕ್ವತೆಯನ್ನು ನೋಡುತ್ತಾ ಸಂಕಲ್ಪದಲ್ಲಿಯೂ ಸಹ ಅವರ ಪರಿಪಕ್ವತೆ ಅಥವಾ ವಾತಾವರಣದ ಪ್ರಭಾವವು ನಿಮ್ಮ ಮೇಲೆ ಆದರೆ ಅದೂ ಸಹ ಭಯವೇ ಆಗಿದೆ. ಆಗ ಅವರು ಸಿಟ್ಟಿಗೇಳುವರು. ಗಲಾಟೆ ಆಗಿಬಿಡುವುದು. ಗೋಂದಲವಾಗಿಬಿಡುವುದು ಎನ್ನುವುದರಿಂದಲೂ ನಿರ್ಭಯರಾಗಬೇಕು. ಆತ್ಮಿಕ ಜ್ಞಾನಿ ಆದ ನಿಮ್ಮ ಕಾಂಡದ ಮೂಲಕ ಕವಲೊಡೆದಿರುವ ಶಾಖೆಗಳೂ ಸಹ ತಮ್ಮ, ಅಲ್ಪಜ್ಞ ಮಾನ್ಯತೆಯಲ್ಲಿ ನಿರ್ಭಯತೆಯ ಪ್ರಭಾವವನ್ನು ಬೀರುತ್ತಾರೆ, ತಮ್ಮ ಅಲ್ಪಮತವನ್ನು ಪ್ರತ್ಯಕ್ಷ ಮಾಡುವಲ್ಲಿ ನಿರ್ಭಯರಾಗಿರುತ್ತಾರೆ. ಸುಳ್ಳನ್ನು ಸತ್ಯವೆಂದು ಸಿದ್ಧ ಮಾಡುವುದರಲ್ಲಿ ಅಟಲ, ಅಚಲ ಆಗಿರುತ್ತಾರೆ. ಹೀಗಿರುವಾಗ ಸರ್ವಜ್ಞ ತಂದೆಯ ಶ್ರೇಷ್ಠ ಮತ ಅಥವಾ ಅನಾದಿ, ಆದಿ ಸತ್ಯವನ್ನು ಪ್ರತ್ಯಕ್ಷ ಮಾಡುವುದರಲ್ಲಿ ಸಂಕೋಚ ಪಡುವುದೂ ಸಹ ಭಯವೇ ಆಗಿದೆ. ಶಾಖೆಗಳು ಅಲುಗಾಡುತ್ತವೆ. ಕಾಂಡವು ಅಚಲ ಆಗಿರುತ್ತದೆ. ಆದರೆ ಇಲ್ಲಿ ಶಾಖೆಗಳು ನಿರ್ಭಯರಾಗಿದ್ದು ಕಾಂಡದಲ್ಲಿ ಸಂಕೋಚದ ಭಯದ ಗಡಿಬಿಡಿ ಇದ್ದರೆ ಅದನ್ನು ಏನೆಂದು ಕರೆಯುವುದು? ಏಕೆಂದರೆ ಪ್ರತ್ಯಕ್ಷತೆಯ ಆಧಾರವಾದ ಸ್ವಚ್ಛತೆ ಹಾಗೂ ನಿರ್ಭಯತೆಯನ್ನು ಪರಿಶೀಲನೆ ಮಾಡಿಕೊಳ್ಳಿರಿ. ಇದನ್ನೇ ಸತ್ಯತೆ ಎಂದು ಕರೆಯಲಾಗುತ್ತದೆ. ಈ ಸತ್ಯತೆಯ ಆಧಾರದಮೇಲೆಯೇ ಪ್ರತ್ಯಕ್ಷತೆಯು ಅವಲಂಭಿಸಿದೆ. ಆದ್ದರಿಂದ ಅಂತಿಮ ಶಕ್ತಿಪೂರ್ಣ ಬಾಂಬ್ ಪರಮಾತ್ಮನ ಪ್ರತ್ಯಕ್ಷತೆಯನ್ನು ಇನ್ನೂ ಪ್ರಾರಂಭ ಮಾಡಿಲ್ಲ. ಇಲ್ಲಿಯವರೆಗಿನ ಫಲಿತಾಂಶದಲ್ಲಿ ರಾಜಯೋಗಿ ಆತ್ಮರು ವಿಶೇಷವಾಗಿ ಇದ್ದಾರೆ, ರಾಜಯೋಗವು ಶ್ರೇಷ್ಠವಾಗಿದೆ. ಕರ್ತವ್ಯವೂ ಶ್ರೇಷ್ಠವಾಗಿದೆ, ಪರಿವರ್ತನೆಯೂ ಶ್ರೇಷ್ಠವಾಗಿದೆ ಎನ್ನುವುದು ಪ್ರತ್ಯಕ್ಷವಾಗಿದೆ. ಆದರೆ ಕಲಿಸುವವರು ಸ್ವಯಂ ಸರ್ವಶಕಕ್ತಿವಂತನೇ ಆಗಿದ್ದಾರೆ. **ಜ್ಞಾನಸೂರ್ಯನೂ ಸಾಕಾರ ಸೃಷ್ಟಿಯಲ್ಲಿ ಉದಯ ಆಗಿದ್ದಾನೆ ಎನ್ನುವುದು ಇನ್ನೂ ಗುಪ್ತ ಆಗಿದೆ.** ಪರಮಾತ್ಮ ಬಾಂಬಿನ ಫಲಿತಾಂಶವು ಏನಾಗುವುದು? ವಿಶ್ವದ ಸರ್ವಾತ್ಮರ ಆಧಾರವೆಲ್ಲವೂ ಸಮಾಪ್ತಿ ಆಗಿ ಒಬ್ಬ ತಂದೆಯ ಆಧಾರವು ಅನುಭವವಾಗುವುದು. ಹೇಗೆ ವಿಜ್ಞಾನದ ಬಾಂಬುಗಳ ಮೂಲಕ ದೇಶಕ್ಕೆ ದೇಶವೇ ನಿರ್ನಾಮವಾಗಿ ಮೊದಲ ದೃಶ್ಯವು ಸ್ವಲ್ಪವೂ ಕಂಡು ಬರುವುದಿಲ್ಲ. ಎಲ್ಲವೂ ಸಮಾಪ್ತಿ ಆಗಿಬಿಡುತ್ತದೆ. ಹೀಗೆ ಈ **ಅಂತಿಮ ಬಾಂಬಿನ ಮೂಲಕ ಸರ್ವ ಅಲ್ಪಕಾಲದ ಸಾಧನಾರೂಪಿ ಸಾಧನವು ಸಮಾಪ್ತಿಯಾಗಿ ಒಂದೇ ಯಥಾರ್ಥ ಸಾಧನವಾದ ರಾಜಯೋಗದ ಮೂಲಕ ಪ್ರತಿಯೊಬ್ಬರ ಮಧ್ಯೆ ತಂದೆಯು ಪ್ರತ್ಯಕ್ಷ ಆಗುವನು. ವಿಶ್ವದಲ್ಲಿ ವಿಶ್ವಪಿತನು ಸ್ಪಷ್ಟವಾಗಿ ಗೋಚರವಾಗುವನು. ಪ್ರತಿಯೊಂದು ಧರ್ಮದ ಆತ್ಮದ ಮೂಲಕ ನಮ್ಮ ತಂದೆ ಎನ್ನುವ ಒಂದೇ ಮಾತು ಹೊರ ಬೀಳುವುದು. ಹಿಂದೂಗಳ ಅಥವಾ ಮುಸಲ್ಮಾನರ ತಂದೆ ಅಲ್ಲ, ಎಲ್ಲರ ತಂದೆ. ಇದನ್ನೇ ಪರಮಾತ್ಮ ಬಾಂಬಿನ ಮೂಲಕ ಅಂತಿಮ ಪ್ರತ್ಯಕ್ಷತೆ ಎಂದು ಕರೆಯಲಾಗುತ್ತದೆ.** ಏನು ಮಾಡುತ್ತಾ ಇದ್ದೀರಿ ಹಾಗೂ ಏನು ಮಾಡಬೇಕಾಗಿದೆ ಎನ್ನುವುದರ ಫಲಿತಾಂಶವನ್ನು ಕೇಳಿದಿರಾ? ಈ ವರ್ಷದಲ್ಲಿ ಪರಮಾತ್ಮ ಬಾಂಬನ್ನು ಹಾಕಿರಿ. ಸ್ವಚ್ಛತೆ ಹಾಗೂ ನಿರ್ಭಯತೆಯ ಆಧಾರದಿಂದ ಸತ್ಯತೆಯ ಮೂಲಕ ಪ್ರತ್ಯಕ್ಷತೆಯನ್ನು ಮಾಡಿರಿ. ಒಳ್ಳೆಯದು

**ಇಂತಹ ತಂದೆಯನ್ನು ವಿಶ್ವದ ಮುಂದೆ ಪ್ರತ್ಯಕ್ಷ ಮಾಡುವವರು ಸದಾ ನಿರ್ಭಯರು, ಸದಾ ಒಬ್ಬರ ಗುಂಗಿನಲ್ಲಿ ಅಮಲೇರಿರುವ ಸಹಜ ರಾಜಯೋಗಿ, ಅಂತಿಮ ಸಮಯವನ್ನು ಸಮೀಪಕ್ಕೆ ತರುವವರು, ಎಂದರೆ ಸರ್ವಾತ್ಮರ ಮನೋಕಾಮನೆಗಳನ್ನು ಪೂರ್ಣ ಮಾಡುವವರು, ತಂದೆಯ ಸಮಾನ ದಯೆ ಅಥವಾ ಕರುಣೆಯ ಸಾಗರ ಆಗಿರುವ ದಯಾಹೃದಯ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ತಂಡಗಳ ಜೊತೆಯಲ್ಲಿ :**

(1) ಎಲ್ಲರೂ ನಿಮ್ಮ ಶ್ರೇಷ್ಠ ಭಾಗ್ಯವನ್ನು ಗುಣಗಾನ ಮಾಡುತ್ತಾ ಸದಾ ಆನಂದದಿಂದ ಇರುತ್ತೀರೋ? ಎಂತಹ ಶ್ರೇಷ್ಠ ಭಾಗ್ಯವೆಂದರೆ ಅದರ ಸ್ತುತಿಯನ್ನು ಸ್ವಯಂ ಭಗವಂತನೇ ಮಾಡುವಂತಹದು. ಇಂತಹ ಭಾಗ್ಯವು ಮತ್ತೆ ಎಂದಾದರೂ ಪಡೆಯುವಿರೇನು? ಭವಿಷ್ಯದಲ್ಲಿಯೂ ಸಹ ಅಂತಹ ಭಾಗ್ಯವು ಇರುವುದಿಲ್ಲ. ಈಗಲ್ಲದಿದ್ದರೆ ಇನ್ನೆಂದಿಗೂ ಇಲ್ಲ ಎನ್ನುವ ಆನಂದ ಇರುತ್ತದೆಯೇ, ಭಾಗ್ಯದ

ನಕ್ಷತವು ಸದಾ ಹೊಳೆಯುತ್ತಿದ್ದರೆ ಪ್ರಕಾಶಿಸುತ್ತಿರುವ ವಸ್ತುವಿನ ಕಡೆಗೆ ಎಲ್ಲರ ಗಮನವೂ ಹೋಗುತ್ತದೆ. ಹೇಗೆ ಪ್ರತಿಯೊಬ್ಬರ ಮಸ್ತಕದ ಮಧ್ಯೆ ಭಾಗ್ಯದ ನಕ್ಷತ್ರವು ಪ್ರಕಾಶಿಸುತ್ತಾ ಇದ್ದರೆ ಇದು ಯಾವ ಭಾಗ್ಯದ ನಕ್ಷತ್ರವು ಪ್ರಕಾಶಿಸುತ್ತಿರುವಂತೆ ಕಂಡು ಬರುತ್ತಾ ಇದೆ ಎಂದು ವಿಶ್ವದ ದೃಷ್ಟಿಯು ಆ ಕಡೆಗೆ ಒಯ್ಯುವುದು. ಹೇಗೆ ಯಾವುದಾದರೂ ವಿಶೇಷ ನಕ್ಷತ್ರವು ವಿಶೇಷ ರೂಪದಿಂದ ಹೊಳೆದರೆ ತಾನಾಗಿಯೇ ಎಲ್ಲರ ಗಮನವು ಅದರ ಕಡೆಗೆ ಹೋಗುತ್ತದೆ. ಅಂತಹ ಭಾಗ್ಯದ ನಕ್ಷತ್ರವು ಎಲ್ಲರನ್ನೂ ಆಕರ್ಷಣೆ ಮಾಡಬೇಕು. ಇಂತಹ ಪ್ರಕಾಶಿಸುತ್ತಿರುವ ನಕ್ಷತ್ರವು ಸ್ವಯಂ ನಿಮಗೂ ಗೋಚರವಾಗಬೇಕು ಹಾಗೂ ವಿಶ್ವಕ್ಕೂ ಕಂಡುಬರಬೇಕು. ಪ್ರಕಾಶಿಸುತ್ತಿರುವ ವಸ್ತುವು ಯಾರಿಗಾದರೂ ಇಷ್ಟವಿಲ್ಲದಿದ್ದರೂ ಸಹ ದೃಷ್ಟಿಯನ್ನು ತಿರುಗಿಸಿದರೂ ಸಹ ಕಂಡುಬರುತ್ತದೆ. ಹಾಗೆಯೇ ನಾಲ್ಕೂ ಕಡೆ ದೃಷ್ಟಿಯನ್ನು ತಿರುಗಿಸಿದರೂ ಕೊನೆಯಲ್ಲಿ ನಿಮ್ಮ ಕಡೆಗೆ ದೃಷ್ಟಿಯು ಹರಿಯುವುದು. ಅಂತಹ ಪ್ರಕಾಶಿಸುತ್ತಿರುವ ಭಾಗ್ಯದ ಅನುಭವ ಆಗುತ್ತದೆಯೇ?

(2) ಈ ಸಮಯದ ಶ್ರೇಷ್ಠ ಸ್ಥಿತಿಯ ಫಲಿತಾಂಶ ಏನೆಂದರೆ ಇಡೀ ಕಲ್ಪದಲ್ಲಿ ಶ್ರೇಷ್ಠ ಆಗುವಿರಿ. ಈ ಸಮಯದಲ್ಲಿ ಶ್ರೇಷ್ಠ ಸ್ಥಿತಿ ಉಳ್ಳವರು ಉತ್ತಮ ಪದವಿಯನ್ನು ಪಡೆಯುವವರಾಗುವಿರಿ. ವಿಶ್ವದಲ್ಲಿ ಪೂಜ್ಯರ ರೂಪದಲ್ಲಿಯೂ ಸಹ ಶ್ರೇಷ್ಠರಾಗುವಿರಿ. ತಂದೆಯ ಮಕ್ಕಳಾಗಿಯೂ ಶ್ರೇಷ್ಠರು, ಭಕ್ತಿಯಲ್ಲಿಯೂ ಶ್ರೇಷ್ಠರು ಹಾಗೂ ಜ್ಞಾನದಲ್ಲಿಯೂ ಶ್ರೇಷ್ಠರು, ರಾಜ್ಯಭಾರ ಮಾಡುವುದರಲ್ಲಿಯೂ ಶ್ರೇಷ್ಠರು ಆಗುವಿರಿ. ಪ್ರತಿಯೊಂದು ಪಾತ್ರವನ್ನೂ ಶ್ರೇಷ್ಠವಾಗಿ ಅಭಿನಯಿಸುವ ಕಾರಣ ಶ್ರೇಷ್ಠರಲ್ಲಿ ಶ್ರೇಷ್ಠ ಆತ್ಮವಾಗಿ ಅನುಭವ ಮಾಡುವಿರಿ.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 28-12-1978.

***ಪರಮಾತ್ಮ ಪ್ರತ್ಯಕ್ಷತೆಗೆ ಆಧಾರ ಸತ್ಯತೆ***

ಪರಮಾತ್ಮನನ್ನು ಪ್ರತ್ಯಕ್ಷ ಮಾಡಲು ಆಧಾರ ಸತ್ಯತೆ. ಸತ್ಯತೆಗೆ ಆಧಾರ ನಿರ್ಭಯತೆ ಮತ್ತು ಸ್ವಚ್ಛತೆ. ಸತ್ಯತೆ ಎಂದರೆ ಸ್ವತಃ ಸತ್ವ ಪ್ರಧಾನ ಸ್ಥಿತಿಯಲ್ಲಿ ಅರ್ಥಾತ್ ಸ್ವ-ಸ್ವರೂಪದಲ್ಲಿರುವುದು ಮತ್ತು ಬುದ್ಧಿ ಅಥವಾ ಸಂಕಲ್ಪದಿಂದಲೂ ಅವಗುಣಗಳನ್ನು ಸ್ವೀಕರಿಸದಿರುವುದು. ನಿರ್ಭಯತೆ ಎಂದರೆ ಸ್ವಭಾವ ಸಂಸ್ಕಾರಗಳಲ್ಲಿ ವಿಜಯಿ ಆಗುವುದರಲ್ಲಿ, ಸಂಬಂಧ, ಸಂಪರ್ಕದಲ್ಲಿ ಸಂಸ್ಕಾರಗಳನ್ನು ಹೊಂದಿಸಿಕೊಂಡು ಹೋಗುವುದರಲ್ಲಿ, ಇತರ ಆತ್ಮರ ಸಂಸ್ಕಾರಗಳನ್ನು ಪರಿವರ್ತನೆ ಮಾಡುವುದರಲ್ಲಿ, ವಿಶ್ವಸೇವೆ ಎಂದರೆ ಸೇವಾ ಕ್ಷೇತ್ರದ ವಾಯುಮಂಡಲವನ್ನು ಮತ್ತು ಇತರರ ಸಿದ್ಧಾಂತಗಳ ಪರಿಪಕ್ವತೆಯನ್ನು ನೋಡಿದಾಗಲೂ, ಸರ್ವಜ್ಞನಾದ ತಂದೆಯ ಶ್ರೇಷ್ಠ ಮತ ಅಥವಾ ಅನಾದಿ, ಆದಿ ಸತ್ಯವನ್ನು ಪ್ರತ್ಯಕ್ಷ ಮಾಡುವುದರಲ್ಲಿ ಧೈರ್ಯವಾಗಿ ಇರುವುದೇ ನಿರ್ಭಯತೆ. ಪ್ರತಿಧರ್ಮದಲ್ಲಿರುವ ಆತ್ಮನಿಂದ "ನಮ್ಮ ತಂದೆ ಹಿಂದೂಗಳ ಅಥವಾ ಮುಸಲ್ಮಾನರಿಗೆ ತಂದೆ ಅಲ್ಲ ಎಲ್ಲರಿಗೂ ತಂದೆ" ಎಂಬ ಮಾತು ಬರುತ್ತದೆ. ಇದನ್ನೇ ಪರಮಾತ್ಮನ ಬಾಂಬಿನಿಂದ ಅಂತಿಮ ಪ್ರತ್ಯಕ್ಷತೆ ಮಾಡುವುದು ಎಂದು ಹೇಳುತ್ತಾರೆ, ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಅಂತಿಮ ಬಾಂಬ್ ಅರ್ಥಾತ್ ಪರಮಾತ್ಮ ಬಾಂಬ್ ಹಾಕುವುದರಿಂದ "ಪರಮಪಿತ ಬಂದಿದ್ದಾರೆ, ಪ್ರತ್ಯಕ್ಷದಲ್ಲಿ ಸರ್ವಶಕ್ತಿವಂತನ ಕರ್ತವ್ಯ ನಡೆಯುತ್ತಿದೆ" ಎಂಬ ಮಾತು ಎಲ್ಲರ ಬಾಯಿಯಿಂದ ಹೊರ ಹೊಮ್ಮಿತು.

2. ನಾನು ಸ್ವಚ್ಛತೆ ಮತ್ತು ನಿರ್ಭಯತೆಯಿಂದ ಸತ್ಯತೆಯನ್ನು ಧಾರಣೆ ಮಾಡಿ ಪರಮಾತ್ಮನನ್ನು ಪ್ರತ್ಯಕ್ಷ ಮಾಡಿದ್ದೇನೆ.

3. ನಾನು ಸ್ವತಃ ಸ್ವರೂಪದಲ್ಲಿ ಅರ್ಥಾತ್ ಆತ್ಮನ ನಿಜವಾದ ಸತ್ವಪ್ರಧಾನ ಸ್ಥಿತಿಯಲ್ಲಿ ಇರುವ ಸ್ವಚ್ಛತಾ ಸ್ವರೂಪ.

4. ನಾನು ಸಂಕಲ್ಪದಿಂದಲೂ ಕೆಟ್ಟ ಅಥವಾ ಅವಗುಣಗಳನ್ನು ಸ್ವೀಕರಿಸದೆ ಶುಭ್ರವಾಗಿ ಇದ್ದೇನೆ.

5. ನಾನು ನನ್ನ ಸ್ವಭಾವ ಸಂಸ್ಕಾರಗಳಲ್ಲಿ ವಿಜಯಿಯಾಗುವುದರಲ್ಲಿ, ಸಂಬಂಧ ಸಂಪರ್ಕಗಳಲ್ಲಿ ಸಂಸ್ಕಾರಗಳನ್ನು ಹೊಂದಿಸಿಕೊಂಡು ಹೋಗುವುದರಲ್ಲಿ, ಇತರ ಆತ್ಮರ ಸಂಸ್ಕಾರಗಳನ್ನು ಪರಿವರ್ತನೆ ಮಾಡುವುದರಲ್ಲಿ, ವಿಶ್ವ ಸೇವೆ ಎಂದರೆ ಸೇವಾ ಕ್ಷೇತ್ರದ ವಾಯುಮಂಡಲವನ್ನು ಮತ್ತು ಇತರ ಆತ್ಮರ ಸಿದ್ಧಾಂತಗಳ ಪರಿಪಕ್ವತೆಯನ್ನು ನೋಡಿಯೂ ಕೂಡ ಧೈರ್ಯವಾಗಿ, ಸರ್ವಜ್ಞನಾದ ತಂದೆಯ ಶ್ರೇಷ್ಠ ಮತವನ್ನು, ಸತ್ಯವನ್ನು ಪ್ರತ್ಯಕ್ಷ ಮಾಡುವುದರಲ್ಲಿ ಧೈರ್ಯದಿಂದ ಇರುವ ನಿರ್ಭಯ ಸ್ವರೂಪ.

6. **"ರಾಜಯೋಗವನ್ನು ಕಲಿಸುವ ಡೈರೆಕ್ಟ್ ಸರ್ವಶಕ್ತಿವಂತನು, ಜ್ಞಾನ ಸೂರ್ಯನು ಸಾಕಾರ ಸೃಷ್ಟಿಯ ಮೇಲೆ ಉದಯಿಸಿದ್ದಾರೆ."** ಎಂಬ ಧ್ವನಿ ವಿಶ್ವವೆಲ್ಲಾ ವ್ಯಾಪಿಸಿತು.

7. ಎಲ್ಲಾ ಧರ್ಮದವರ ಬಾಯಿಯಿಂದ ಶಿವ "ಪರಮಾತ್ಮ ಎಲ್ಲರಿಗೂ ತಂದೆ" ಎಂಬ ಮಾತು ಹೊರಹೊಮ್ಮಿತು ಮತ್ತು ಶಿವ ತಂದೆ ಪ್ರತ್ಯಕ್ಷವಾದರು.